


**ಮೈಸೂರು ದಸರ- ಅತಿ ಸುಂದರ**

ಸರ್ವಧರ್ಮದ ಸಡಗರ,
ನಾಡಹಬ್ಬ ಮೈಸೂರು ದಸರ
ಹಿಂದೂ. ಕ್ರೈಸ್ತ, ಮುಸಲ್ಮಾನರ
ಒಮ್ಮೀತದ ಪರಂಪರ
ಮೈಸೂರರಸರ ವೈಶಿಷ್ಟ್ಯದ ಆಗರ
ಓ ಮೈಸೂರು ದಸರಾ ನೀ
ಧರ್ಮಾತೀತದ ಸಾಗರ
ಅಂತೆಯೇ ನೈಜ ಸುಂದರ...

-ನೆಲರಾಂ, ಬೆಂಗಳೂರು

ಲೇಖನ ಮೆಚ್ಚಿದವರು: ದೇಬೂರು ಮಂಜುನಾಥ, ನಂಜನಗೂಡು/ ಮಾಲತಿರಾಜು, ಬೆಂಗಳೂರು/ ಎಂ.ಜಿ.ಆರ್.ಶೇಖರ್, ದೊಡ್ಡಬಳ್ಳಾಪುರ

**ಕಾಲ್ಚೆಂಡು: ಪಾಡು!**

'ಫುಟ್‌ಬಾಲ್‌ನಲ್ಲಿ ಟೂಪೀಸ್ ಬೆಡಗು' (ಡಿ. ಗರುಡ) ಅಂಥ ಬೆಡಗಿಯರನ್ನು ನೋಡಿದವರ ಮನಸ್ಸುಗಳೂ (ಅವರ) ಕಾಲ್ಚೆಂಡುಗಳಾಗುತ್ತವೆಯೆ? (ಅಂತೂ ಎಂಥೆಂಥ ಹೊಸ ಹೊಸ ಪಾಡು, ಪ್ರಮದೆಯರಿಂದ ಪುರುಷರಿಗೆ!)

-ಸಿಪಿಕೆ, ಮೈಸೂರು

**ಜನ ಸಾಮಾನ್ಯರಿಗೆ ಅಲ್ಲ**

ಗ್ಯಾಲಿಬೋರ್ ಪರಿಚಯ ಲೇಖನ ಮನಸ್ಸಿಗೆ ಮುದ ನೀಡಿತಾದರೂ, ದಿನವೊಂದಕ್ಕೆ ಅಲ್ಲಿನ ಖರ್ಚು 2,250 ರೂ. ಎಂದು ತಿಳಿದಾಗ ಇದು ಜನಸಾಮಾನ್ಯರ ಕೈಗೆಟುಕುವಂಥದ್ದಲ್ಲ ಅನಿಸಿತು.

ಸತತವಾಗಿ ಪ್ರಶಸ್ತಿ ಗೆಲ್ಲುತ್ತಿರುವ ಬಿಲಿಯರ್ಡ್ಸ್ ತಾರೆ ಪಂಕಜ್ ಆಡ್ವಾಣಿ ಅವರ ಸಾಧನೆ ವರ್ಣಿಸಲಸದಳವಾದದ್ದು. ಆದರೆ ಅವರ ಸಾಧನೆಗೆ ಸಿಗಬೇಕಾದಷ್ಟು ಪ್ರಚಾರ-ಪ್ರೋತ್ಸಾಹ ದೊರೆತಿಲ್ಲ.

-ನಾಗದೇವಾಡಿಗ, ಕಂಬದಕೋಣೆ

**ಚೊಕ್ಕ ಕಥೆ**

ಎಚ್.ಎಸ್. ಪಾರ್ವತಿಯವರ 'ತಂದೆಯಂತೆ ಮಕ್ಕಳು' ಕಥೆ ಚಿಕ್ಕದಾಗಿಯೂ ಚೊಕ್ಕವಾಗಿಯೂ ಇತ್ತು.

-ಪಿ.ಎನ್. ಶ್ರೀವತ್ಸ, ಬೆಂಗಳೂರು

**ಉತ್ತಮ ಕಥೆ**

ಎಚ್.ಕೆ. ಅನಸೂಯ ಸಂಪತ್ ಅವರ ಕತೆ 'ಸಾಂಗತ್ಯ' ಚೆನ್ನಾಗಿತ್ತು.

-ಸು. ವಿಜಯಲಕ್ಷ್ಮಿ, ಶಿವಮೊಗ್ಗ/ ಎಚ್.ಎನ್.ವಿಶ್ವನಾಥ್, ಶಿವಮೊಗ್ಗ

**ಕತ್ತೆ ಪುರಾಣ!**

ಎಸ್.ಆರ್. ರಾವಳ ಅವರ 'ಕತ್ತೆ ಪುರಾಣ' ಪ್ರಬಂಧ ಚೆನ್ನಾಗಿ ಮೂಡಿಬಂದಿದೆ.

-ಮಹಾದೇವಿ, ಶಿವಮೊಗ್ಗ/ ಎ.ಎಸ್.ರೇಷ್ಮಾ, ಬಾಳೆಹೊನ್ನೂರು

**ಧೃತಿಜಾ ಗ್ರೇಟ್**

ಧೃತಿಜಾ ಸಾತವಲ್ಲಿ 3ನೇ ತರಗತಿ ವಿದ್ಯಾರ್ಥಿನಿ ಚಿತ್ರಕಲೆಯಲ್ಲಿ ಸಾಧನೆ ಮಾಡಿದ್ದು ಗ್ರೇಟ್ ಎನಿಸಿತು.

-ವಿಕಾಸ್, 5ನೇ ತರಗತಿ, ತುಮಕೂರು

**'ಸುಧಾ' ಬೇಕೇ ಬೇಕು**

'ಸುಧಾ' ವಾರಪತ್ರಿಕೆ ಆರಂಭವಾದಾಗಿನಿಂದಲೂ ನಾನು ಅದರ ಓದುಗ. ಚಿತ್ರದುರ್ಗದಲ್ಲಿ ವಿದ್ಯಾರ್ಥಿಯಾಗಿದ್ದ ಕಾಲದಲ್ಲಿ ನಾವು 4 ಜನ ಸಹಪಾಠಿಗಳು ಎಷ್ಟೇ ಸಮಸ್ಯೆಯಿದ್ದರೂ ಕಷ್ಟಪಟ್ಟು ತಲಾ 10-15 ಪೈಸೆ ಸೇರಿಸಿ ಪತ್ರಿಕೆ ಕೊಂಡು ಓದಿ ಸರದಿಯಂತೆ ಇಟ್ಟುಕೊಳ್ಳುತ್ತಿದ್ದೆವು. ಅಂದಿನಿಂದಲೂ ಪತ್ರಿಕೆಯೊಡನೆ ನನ್ನದು ಭಾವನಾತ್ಮಕ ಸಂಬಂಧ. ಈಗ ಪತ್ರಿಕೆ ಬೆಲೆ 12 ರೂ. ಆಗುತ್ತಿದೆ. ಮುಂದೆ 14 ರೂ. ಆಗಬಹುದು. ಆಗಲಿ ಬಿಡಿ. ಆದರೆ ಪ್ರತಿವಾರ 'ಸುಧಾ' ಮಾತ್ರ ನಮ್ಮ ಮನೆಗೆ ಬರಲೇಬೇಕು.

-ಪಿ.ಎ. ಸುಧೀಂದ್ರ, ಬೆಂಗಳೂರು

**ರಾಮ್ ಅಂಕಣ ಅಚ್ಚುಮೆಚ್ಚು**

'ಸುಧಾ' ಪತ್ರಿಕೆ ಉತ್ತಮವಾದ ಮತ್ತು ವಿಭಿನ್ನ ರೀತಿಯ ವಿಚಾರಗಳಿಂದ ಕೂಡಿ ಸೊಗಸಾಗಿತ್ತು. ಸಂಗ್ರಹಯೋಗ್ಯವಾಗಿತ್ತು. ರಾಮ್‌ರ 'ನೀವು ಕೇಳಿದಿರಿ' ಅಂಕಣ ಅಚ್ಚುಮೆಚ್ಚು ನನಗೆ.

-ಎಸ್. ನವೀನ್, ಅರಸೀಕೆರೆ

**ಅಪರೂಪದ ವಿಚಾರ ಲಹರಿ**

ವೈನತೇಯ ಅವರು ಗಂಧವ್ರತದ ಬಗೆಗೆ ಬರೆದಿರುವುದು ಇತ್ತೀಚಿನ ದಿನಗಳಲ್ಲೇ ತೀರಾ ಅಪರೂಪದ ವಿಚಾರ ಲಹರಿ.

-ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

**ಬೇಸರವಿಲ್ಲ**

ಪ್ರಿಯೆ ನೀ
ನನ್ನ ಪ್ರಾಣ
ನೀ ಬರುವ ದಿನವನ್ನು
ಕಾತರದಿ ಕಾಯುವೆ
ಆಗಬಹುದು
ನೀನು ದುಬಾರಿ
ಆದರೂ
ನನಗಿಲ್ಲ ಬೇಸರ
ನನ್ನ ಪ್ರಿಯ'ಸುಧಾ'

-ಮಹಾವೀರ ಕಾಸಾರ, ಚನ್ನಗಿರಿ



